# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2588
2. ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು
4. ಉತ್ತರಿಸುವ ದಿನಾಂಕ : 24.03.2022

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಲೋಕಾಯುಕ್ತದಲ್ಲಿ ಪ್ರಸಕ್ತ ಎಷ್ಟು ಸಿಬ್ಬಂದಿ ಹಾಗೂ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ; (ಜಿಲ್ಲಾವಾರು ವಿವರಗಳನ್ನು ನೀಡುವುದು) | ಕರ್ನಾಟಕ ಲೋಕಾಯುಕ್ತದಲ್ಲಿ ಪ್ರಸಕ್ತ 990 ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾವಾರು ವಿವರಗಳನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ. |
| (ಆ) | ಲೋಕಾಯುಕ್ತದಲ್ಲಿ ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳೇನು; | ಕರ್ನಾಟಕ ಲೋಕಾಯುಕ್ತದಲ್ಲಿ ಲೋಕಾಯುಕ್ತ ಕಾಯ್ದೆ 1984 ಮತ್ತು ಕರ್ನಾಟಕ ಲೋಕಾಯುಕ್ತ ನಿಯಮಗಳು 1985ರಲ್ಲಿ ನಿಗಧಿಪಡಿಸಿದಂತೆ ಸದರಿ ಕಾಯ್ದೆಯ ಕಲಂ 12(1) ಮತ್ತು 12(3)ರಡಿ ಸರ್ಕಾರಕ್ಕೆ ವರದಿಗಳನ್ನು ಕಳುಹಿಸುವುದು, ಕೆ.ಸಿ.ಎಸ್. (ಸಿ.ಸಿ.ಎ) ನಿಯಮಗಳ ಪ್ರಕಾರ 1957ರ ನಿಯಮ 14(ಎ)ರಡಿಯಲ್ಲಿ ಸರ್ಕಾರವು ವಹಿಸುವ ಪ್ರಕರಣಗಳ ಬಗ್ಗೆ ವಿಚಾರಣೆ ಕೈಗೊಂಡು ಸರ್ಕಾರಕ್ಕೆ ಶಿಫಾರಸ್ಸು ವರದಿ ಸಲ್ಲಿಸುವುದು ಹಾಗೂ ಭ್ರಷ್ಟಾಚಾರ ನಿರೋಧಕ ಕಾಯ್ದೆ 1988ರಡಿ ದಾಖಲಾಗಿದ್ದ ಪ್ರಕರಣಗಳ ತನಿಖೆ, ದೋಷಾರೋಪಣಾ ಪಟ್ಟಿ ಸಲ್ಲಿಸುವುದು ಮತ್ತು ಈ ಸಂಬಂಧ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. |
| (ಇ) | ಕಳೆದ ಮೂರು ವರ್ಷದಿಂದ ಎಷ್ಟು | 1. ಭ್ರಷ್ಟಾಚಾರ ನಿರೋಧಕ ಕಾಯ್ದೆಯಡಿ ಕರ್ನಾಟಕ |



Generated from eOffice by G JAGADEESHA, CMO-JS(GJ), JOINT SECREATRY, CMO on 24/03/2022 10:23 AM

| | | |
|---|---|---|
| | ಪ್ರಕರಣಗಳನ್ನು ತನಿಖೆ ನಡೆಸಲಾಗುತ್ತಿದೆ; ತನಿಖೆ ನಡೆಸಿರುವ ಎಷ್ಟು ಪ್ರಕರಣಗಳಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗಿದೆ; | ಲೋಕಾಯುಕ್ತ ಪೊಲೀಸ್ ವಿಭಾಗದಿಂದ ಈ ಹಿಂದೆ ಅಂದರೆ ಮಾರ್ಚ್ 2016ರ ಹಿಂದೆ ದಾಖಲಾಗಿದ್ದ ಪ್ರಕರಣಗಳ ಪೈಕಿ ಕಳೆದ ಮೂರು ವರ್ಷಗಳಲ್ಲಿ 192 ಪ್ರಕರಣಗಳಲ್ಲಿ ತನಿಖೆ ನಡೆಸಲಾಗುತ್ತಿದೆ. ಅವುಗಳಲ್ಲಿ ದಿನಾಂಕ:01.01.2019 ರಿಂದ ದಿನಾಂಕ:28.02.2022ರವರೆಗೆ 31 ಪ್ರಕರಣಗಳಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗಿದೆ.<br>(ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು, ಭ್ರಷ್ಟಾಚಾರ ನಿರೋಧಕ ಕಾಯ್ದೆ 1988ರ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ತನಿಖೆಯನ್ನು ನಡೆಸುವುದರೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿಯಲ್ಲಿ ದಾಖಲಾಗುವ ಪ್ರಕರಣಗಳಲ್ಲಿ ಗೌರವಾನ್ವಿತ ಲೋಕಾಯುಕ್ತರು, ಗೌರವಾನ್ವಿತ ಉಪಲೋಕಾಯುಕ್ತರು ತನಿಖೆಗಾಗಿ ವಹಿಸುವ ಹಲವಾರು ಪ್ರಕರಣಗಳಲ್ಲಿ ಸಹ ತನಿಖೆಯನ್ನು ನಡೆಸಿ, ಕಾಲಕಾಲಕ್ಕೆ ವರದಿಯನ್ನು ಸಲ್ಲಿಸುತ್ತಿದ್ದು, ಗೌರವಾನ್ವಿತರ ನಿರ್ದೇಶನಗಳ ಅನ್ವಯ ಜಿಲ್ಲಾ ಮಟ್ಟದಲ್ಲಿ ಕಾಲ-ಕಾಲಕ್ಕೆ ಸಾರ್ವಜನಿಕ ಕಚೇರಿಗಳಿಗೆ ಭೇಟಿ ನೀಡಿ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವುದು ಹಾಗೂ ತಪ್ಪಿತಸ್ಥರ ವಿರುದ್ಧ ತನಿಖೆ ಕೈಗೊಳ್ಳಲು ಶಿಫಾರಸ್ಸುಗಳನ್ನು ಮಾಡಲಾಗುತ್ತಿದೆ).<br><br>2. ಮೇಲ್ಕಂಡ ಪ್ರಕರಣಗಳಲ್ಲದೇ ದಿನಾಂಕ:01.03.2019 ದಿನಾಂಕ:28.02.2022ರ ಅವಧಿಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿಯಲ್ಲಿ ಒಟ್ಟು 12086 ಪ್ರಕರಣಗಳು ದಾಖಲಾಗಿದ್ದು. ಅವುಗಳಲ್ಲಿ ತನಿಖೆಯನ್ನು ನಡೆಸಿ ಒಟ್ಟು 11236 ಪ್ರಕರಣಗಳು ವಿಲೇವಾರಿಯಾಗಿರುತ್ತವೆ. ಈ ಪ್ರಕರಣಗಳ ಪೈಕಿ |

| | | |
|---|---|---|
| | | (ಎ) ಕಲಂ 12(1)ರಡಿ ಕಳುಹಿಸಿರುವ ವರದಿಗಳು-137 ಪ್ರಕರಣಗಳು.<br>(ಬಿ) ಕಲಂ 12(2)ರಡಿ ಸರ್ಕಾರದಿಂದ ಸ್ವೀಕೃತವಾಗಿರುವ ಅನುಪಾಲನಾ ವರದಿಗಳು-363 ಪ್ರಕರಣಗಳು (ಸದರಿ ಅವಧಿ ಹಾಗೂ ಹಿಂದಿನ ಅವಧಿಯಲ್ಲಿ ಕಳುಹಿಸಿರುವ ಶಿಫಾರಸ್ಸಿನ ಮೇಲೆ ಸ್ವೀಕೃತವಾಗಿರುವ ಅನುಪಾಲನಾ ವರದಿಗಳನ್ನು ಒಳಗೊಂಡಿರುತ್ತದೆ)<br>(ಸಿ) ಕಲಂ 12(3)ರಡಿ ಕಳುಹಿಸಿರುವ ವರದಿಗಳು-779 ಪ್ರಕರಣಗಳು.<br>(ಡಿ) ಕಲಂ 12(4)ರಡಿ ಸರ್ಕಾರದಿಂದ ಸ್ವೀಕೃತವಾಗಿರುವ ಅನುಪಾಲನಾ ವರದಿಗಳು-932 ಪ್ರಕರಣಗಳು. (ಸದರಿ ಅವಧಿ ಹಾಗೂ ಹಿಂದಿನ ಅವಧಿಯಲ್ಲಿ ಕಳುಹಿಸಿರುವ ಶಿಫಾರಸ್ಸಿನ ಮೇಲೆ ಸ್ವೀಕೃತವಾಗಿರುವ ಅನುಪಾಲನಾ ವರದಿಗಳನ್ನು ಒಳಗೊಂಡಿರುತ್ತದೆ) |
| | | 3. ಅಲ್ಲದೇ, ಸದರಿ ಅವಧಿಯಲ್ಲಿ, ಕೆ.ಸಿ.ಎಸ್.(ಸಿ.ಸಿ.ಎ.) ನಿಯಮ 14(ಎ)ರಡಿ ಇಲಾಖಾ ವಿಚಾರಣೆ ನಡೆಸಿ 1444 ಪ್ರಕರಣಗಳಲ್ಲಿ ಗೌರವಾನ್ವಿತ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರವರ ಶಿಫಾರಸ್ಸುಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ. ಈ ಪ್ರಕರಣಗಳಲ್ಲಿ ಹಾಗೂ ಹಿಂದಿನ ಅವಧಿಯಲ್ಲಿ ಕೆ.ಸಿ.ಎಸ್.(ಸಿ.ಸಿ.ಎ) ನಿಯಮ 14(ಎ)ರಡಿ ವಿಚಾರಣೆ ನಡೆಸಿ ಕಳುಹಿಸಲಾದ ಶಿಫಾರಸ್ಸಿನನ್ವಯ 1661 ಪ್ರಕರಣಗಳಲ್ಲಿ ಸರ್ಕಾರದ ಆದೇಶಗಳನ್ನು ಹೊರಡಿಸಲಾಗಿರುತ್ತದೆ. |
| (ಈ) | ಆರೋಪಿತ ಪ್ರಕರಣಗಳ ಪಟ್ಟಿಯಲ್ಲಿ ಎಷ್ಟು ಪ್ರಕರಣಗಳು ಆರೋಪ ಸಾಬೀತಾಗಿ ಶಿಕ್ಷೆಯಾಗಿವೆ; | 1. ಕಳೆದ ಮೂರು ವರ್ಷಗಳಲ್ಲಿ ಭ್ರಷ್ಟಾಚಾರ ನಿರೋಧಕ ಕಾಯ್ದೆಯಡಿಯಲ್ಲಿ ದೋಷರೋಪಣಾ ಪಟ್ಟಿ ಸಲ್ಲಿಸಲಾದ ಪ್ರಕರಣಗಳು ಮಾನ್ಯ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುತ್ತವೆ. |



Generated from eOffice by G JAGADEESHA, CMO-JS(GJ), JOINT SECRETARY, CMO on 24/03/2022 10:23 AM

DFA/707697

| | | |
|---|---|---|
| | | 2. ಕಳೆದ 3 ವರ್ಷಗಳಲ್ಲಿ ಭ್ರಷ್ಟಾಚಾರ ನಿರೋಧಕ ಕಾಯ್ದೆಯಡಿಯಲ್ಲಿ 111 ಪ್ರಕರಣಗಳಲ್ಲಿ ಶಿಕ್ಷೆಯಾಗಿರುತ್ತವೆ. |
| (ಉ) | ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮಾಸಿಕವಾಗಿ ಎಷ್ಟು ಆರ್ಥಿಕ ವೆಚ್ಚವನ್ನು ಸರ್ಕಾರ ಭರಿಸುತ್ತಿದೆ? | ಕರ್ನಾಟಕ ಲೋಕಾಯುಕ್ತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮಾಸಿಕವಾಗಿ ಒಟ್ಟು ರೂ.3,97,36,571/-ಗಳ (ಜನವರಿ 2022ರ ಮಾಹೆಯಲ್ಲಿದ್ದಂತೆ) ಆರ್ಥಿಕ ವೆಚ್ಚವನ್ನು ಭರಿಸಲಾಗಿದೆ. |

**ಸಂಖ್ಯೆ: ಸಿಆಸುಇ 30 ಸೇಲೋಲೋಯು 2022**

**(ಬಸವರಾಜ ಬೊಮ್ಮಾಯಿ)**
**ಮುಖ್ಯಮಂತ್ರಿ**



Generated from eOffice by G JAGADEESHA, CMO-JS(GJ), JOINT SECRETARY, CMO on 24/03/2022 10:23 AM

# ಅನುಬಂಧ

| ಕ್ರಮ ಸಂಖ್ಯೆ | ಜಿಲ್ಲೆ | ಸಿಬ್ಬಂದಿಗಳು (ಗ್ರೂಪ್ ಸಿ&ಡಿ) | ಅಧಿಕಾರಿಗಳು (ಗ್ರೂಪ್ ಎ&ಬಿ) |
|---|---|---|---|
| 01 | ಬೆಂಗಳೂರು | 356 | 112 |
| 02 | ಬಳ್ಳಾರಿ | 10 | 4 |
| 03 | ಬೆಳಗಾವಿ | 29 | 6 |
| 04 | ವಿಜಯಪುರ | 20 | 4 |
| 05 | ಚಿತ್ರದುರ್ಗ | 18 | 4 |
| 06 | ಚಿಕ್ಕಬಳ್ಳಾಪುರ | 16 | 4 |
| 07 | ದಾವಣಗೆರೆ | 14 | 3 |
| 08 | ಧಾರವಾಡ | 18 | 5 |
| 09 | ಹಾಸನ | 16 | 3 |
| 10 | ಕಲಬುರಗಿ | 17 | 5 |
| 11 | ಕಾರವಾರ | 8 | 3 |
| 12 | ಕೋಲಾರ | 11 | 4 |
| 13 | ಮೈಸೂರು | 28 | 6 |
| 14 | ಮಂಗಳೂರು | 14 | 4 |
| 15 | ರಾಯಚೂರು | 12 | 3 |
| 16 | ರಾಮನಗರ | 11 | 4 |
| 17 | ತುಮಕೂರು | 15 | 4 |
| 18 | ಯಾದಗಿರಿ | 19 | 4 |
| 19 | ಹೊಸಪೇಟೆ | 11 | 3 |
| 20 | ಬಾಗಲಕೋಟೆ | 17 | 3 |
| 21 | ಶಿವಮೊಗ್ಗ | 14 | 3 |
| 22 | ಹಾವೇರಿ | 11 | 3 |
| 23 | ಗದಗ | 9 | 3 |
| 24 | ಚಿಕ್ಕಮಗಳೂರು | 12 | 2 |
| 25 | ಬೀದರ | 10 | 3 |
| 26 | ಚಾಮರಾಜನಗರ | 15 | 3 |
| 27 | ಮಡಿಕೇರಿ | 6 | 1 |
| 28 | ಉಡುಪಿ | 11 | 2 |
| 29 | ಕೊಪ್ಪಳ | 14 | 3 |
| 30 | ಮಂಡ್ಯ | 14 | 3 |
| | ಒಟ್ಟು | 776 | 214 |

Registrar
Karnataka Lokayukta
Bangalore